ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಉತ್ತರ ಕನ್ನಡ ಜಿಲ್ಲೆ ಅರಣ್ಯ ಪ್ರದೇಶದ ಜಿಲ್ಲೆಯಾಗಿದೆ. ಒಂದು ಶಾಲೆ ಪ್ರಾರಂಭ ಮಾಡಬೇಕಾದರೆ 25 ಜನ ಹುಡುಗರು ಇರಬೇಕೆಂದು ನಿಯಮವಿದ್ದರೂ ಕೂಡ ಈ ಪ್ರದೇಶದಲ್ಲಿ 15 ಜನ ಹುಡುಗರು ಇದ್ದರೆ ಒಂದು ಶಾಲೆ ಪ್ರಾರಂಭ ಮಾಡಬಹುದೆಂದು ಹಿಂದಿನ ಮುಂಬೈ ರೂಲ್ಸ್‌ನಲ್ಲಿ ಇತ್ತು. ಆ ರೂಲ್ಸ್‌ನ್ನು ನಮ್ಮ ಸರ್ಕಾರ ದವರು ಮುಂದುವರೆಸಿದ್ದಾರೆಯೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದೇ ಪದ್ಧತಿಯನ್ನು ಮುಂದುವರೆಸಿದ್ದೇವೆ.

Work relating to Chakenahalli Project in Holenarasipur Taluk

35. Sri H. N. NANJE GOWDA (Arkalgud).—

Will the Minister of State for Minor Irrigation be pleased to state :—

(*a*) when the construction work of the Chakenahalli Project in Holenarasipur Taluk in Hassan District was commenced and the estimated cost of the said Project when it was commenced ;

(*b*) the name of the contractor to whom the work was entrusted ; the time stipulation for the completion of this work that was agreed by the contractor when the work was entrusted and whether the work has been completed within the stipulated time (a copy of the tender agreement may be placed on the Table of the House) ;

(*c*) if not, the reason for the same ;

(*d*) whether Government has taken action against the contractor for not completing the work within the time stipulated in the agreement ;

(*e*) whether the estimate was revised later on ; if so, the compelling reasons for revising the estimates later and the cost of the revised estimate ;

(*f*) whether the same contractor continued the work or it was given to some other contractor ; and if it was given to some other contractor, was it by inviting fresh tenders or on piecework basis ?

Smt. BASAVARAJESWARI (Deputy Minister for Social Welfare and Minor Irrigation) :—

(*a*) The construction work of the Chakenahalli Project was commenced on 7th January 1960 and the estimated cost of the Project was Rs. 8 lakhs at the commencement of the work.

(*b*) The work was entrusted to Messrs. Karnataka Construction Company, Holenarasipur. The time stipulated for the completion of the work was 23 months and it was not completed within the stipulated time. A copy of the tender agreement is appended.

(SMT. BASAVARAJESWARI)

(*c*) The required progress was not achieved within the stipulated time due to—

(i) slackness on the part of the contractor.

(ii) due to technical deviations found necessary during execution.

(*d*) The contract has been cancelled and action is being taken against the defaulting contractor as per terms of the agreement.

(*e*) Yes. The reasons for revising the estimate are due to—

(i) the foundation of the waste weir had to be taken to deeper depths to reach hard strata.

(ii) change in the design to utilise the full yield so as to impound more water for developing more atchkat under the tank. The cost of the revised estimate is Rs. 41 lakhs.

(*f*) The old contractor continued the work till July 1968. The balance work was entrusted to other contractors. The balance work was taken up partly on tender basis and partly on piecework system.

Copy of Tender Agreement

Rs. 1-50 Stamped paper

ಮೈಸೂರು ಸರ್ಕಾರದ ಗೌರ್ನರ್‌ರವರ ಪರವಾಗಿ ಹಾಸನದ ಎಕ್ಸಿಕ್ಯುಟೀವ್ ಇಂಜಿನಿಯರ್ ಸಾಹೇಬರವರಿಗೆ ಹೊಳೆನರಸೀಪುರದ ಟೌನಿನಲ್ಲಿರುವ ಕರ್ಣಾಟಕ ಕನ್‌ಸ್ಟ್ರಕ್ಷೆನ್ ಕಂಪನಿಯ ಪಾಲು ದಾರರುಗಳಾದ ಲೇಟ್ ರಸಾಲಸಾಹೇಬರ ಮಕ್ಕಳು ಮಿರ್ಜಾಸಾದಕ್ ಆಲಿಬೇಗ್ ಮಿರ್ಜಾಅಸ್ಕರ್ ಆಲ್‌ಬೇಗ್ ಮಿರ್ಜಾಮಹಮದ್ ತಖಿ ಮತ್ತು H. ಮಂಜಯ್ಯನವರ ಮಗ H. M. ಸೀತಾರಾಮಯ್ಯನೂ ಸಹಾ ಸೇರಿ ಬರೆದು ಕೊಟ್ಟ ಕಂಟ್ರಾಕ್ಟ್ ಮುಚ್ಚಳಿಕೆ.

ಇದೇ ತಾಲ್ಲೂಕ್ ಹಳೇಕೋಟೆ ಹೋಬಳಿ, ಚಾಕೇನಹಳ್ಳಿ ಗ್ರಾಮದಲ್ಲಿ ಹೆಬ್ಬಳ್ಳಕ್ಕೆ ಹೊಸ ಕೆರೆ ಕಟ್ಟಲು ನಮ್ಮ ಜೆಂಡರು ಅಪ್ರೂ ಆಗಿರುವುದು ನರಿಯಪ್ಪೇ. ನದರಿ ಕೆಲಸವನ್ನು 7-1-1960 ರಿಂದ ಪ್ರಾರಂಭಿಸಿ ಮಾಹೆಯಾನ ಮುವತ್ತೈದು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದೆ ಪ್ರೊಗ್ರೆಸ್ ತೋರಿಸಿ 7-12-1961 ಕ್ಕೆ ಕೆಲಸವನ್ನು ಪೂರೈಸುತ್ತೇವೆ. ಕೆಲಸವನ್ನು ಇರಾಸೆಯವರು ಒಪ್ಪುವಂತೆ, ಸ್ಪೆಸಿಫಿಕೇಷನ್ ಅನುಸರಿಸಿ ಕೆಲಸಮಾಡಲು ಒಪ್ಪಿರುತ್ತೇವೆ. ಜೆಂಡರು ರೇಟಿಗಿಂತ ಹೆಚ್ಚಿಗೆ ಮೊಬಲಗನ್ನು ಕೇಳುವುದಿಲ್ಲ. ಕೆಲಸದ ಕಾಲದಲ್ಲಿ ಆಳುಗಳಿಗೆ ಏನಾದರೂ ಅಪಾಯ ಸಂಭವಿಸಿದಲ್ಲಿ ಸರ್ಕಾರದ ರೂಲ್ಸು ಮೇರೆ ಪರಿಹಾರವನ್ನು ಕೊಡಲು ಒಪ್ಪಿರುತ್ತೇವೆ. ಕೆಲಸದ ವಿಷಯದಲ್ಲಿ ಎಗ್ಸಿಕ್ಯುಟೀವ್ ಇಂಜಿನಿಯರ್‌ರವರಿಗೂ ನಮಗೂ ಯಾವ ವಿಧವಾದ ತಕರಾರು ಬಂದಲ್ಲಿ ಹಜರತ್ ಸೂಪರಿಂಟೆಂಡಿಂಗ್ ಇಂಜಿನಿಯರ್ ಅಥವಾ ಚೀಫ್ ಇಂಜಿನಿಯರ್‌ರವರ ತೀರ್ಮಾನಕ್ಕೆ ಬದ್ಧರಿರುತ್ತೇವೆ. ಒಂದು ವೇಳೆ ಕೆಲಸವನ್ನು ನಿಗದಿಯಾದ ವೇಳೆಯಲ್ಲಿ ಪೂರೈಸದೇ ಹೋದಲ್ಲಿ ನಮ್ಮ ಕಂಟ್ರಾಕ್ಟನ್ನು ಯಾವವಿಧವಾದ ಅಡ್ಡಿಯೂ ಇಲ್ಲದೆ ರದ್ದು ಪಡಿಸಬಹುದೆಂದು ಒಪ್ಪಿ ಬರೆದು ಕೊಟ್ಟ ಕಂಟ್ರಾಕ್ಟ್ ಮುಚ್ಚಳಿಕೆ.

Before me.
(Sd.) S. Neelakantappa
7-1-1960,
Executive Engineer,
Hassan Division.

Sd/ Sadak Ali Beig
Sd/ H. M. Sitaramaiah
Sd/Mirza Asgar Ali Beig
Sd/Mirza Mahmad Taki

"Copy"

ಶ್ರೀ ಎಚ್. ಎನ್. ನಂಜೇಗೌಡ.—ಟೆಂಡರ್ ಅಗ್ರಿಮೆಂಟ್ ಪ್ರಕಾರ ಈ ಕೆಲಸ 7-12-1961 ಕ್ಕೆ ಮುಗಿಸಬೇಕಾಗಿತ್ತು. ಆದರೆ ಈ ಕೆಲಸ ಮುಗಿಸದೇ ಇರುವುದಕ್ಕೆ ಎರಡು ಕಾರಣ ಕೊಟ್ಟಿದ್ದೀರಿ. ಎಸ್ಟಿಮೇಟ್ ರಿವೈಸ್ ಮಾಡಿರುವುದು ಒಂದು ಕಾರಣ. ಕಂಟ್ರಾಕ್ಟನ್ನು ರದ್ದುಪಡಿಸಿರುವುದು ಎರಡನೆಯ ಕಾರಣ. ಈ ರೀತಿ ರದ್ದುಪಡಿಸುವುದಕ್ಕೆ ಮೊದಲೇ ಎಸ್ಟಿಮೇಟನ್ನು ರಿವೈಸ್ ಮಾಡಲಾಯಿತೋ ಅಥವಾ ರದ್ದುಪಡಿಸಿದ ಮೇಲೆ ರಿವೈಸ್ ಮಾಡಲಾಯಿತೋ ?

†ಶ್ರೀಮತಿ ಬಸವರಾಜೇಶ್ವರಿ.—ಅಗ್ರಿಮೆಂಟ್‌ನ್ನು ಕ್ಯಾನ್ಸಲ್ ಮಾಡಲಿಲ್ಲ. ಕೆಲಸ ಮಾಡುವುದು ನಿಧಾನವಾಗಿತ್ತು, ಮತ್ತು ಎಸ್ಟಿಮೇಟನ್ನು ಕೂಡ ರಿವೈಸ್ ಮಾಡಬೇಕಾಗಿತ್ತು. ಈಗ ಎಸ್ಟಿಮೇಟ್ ರಿವೈಸ್ ಮಾಡಿದ ಮೇಲೆ ಅದೇ ಕಂಟ್ರಾಕ್ಟರ್ ಕೆಲಸ ಮುಂದುವರಿಸಿದ್ದಾರೆ.

Sri H. N. NANJE GOWDA.—The contractor undertook to complete the work before 7th December 1961. He did not do it. What action has been taken against him and what were the compelling reasons to entrust the work again to the same contractor ?

ಶ್ರೀಮತಿ ಬಸವರಾಜೇಶ್ವರಿ.—1961ರೊಳಗೆ ಕೆಲಸ ಮುಗಿಸಬೇಕಾಗಿತ್ತು. ಆದರೆ ಮುಗಿಸಲಿಲ್ಲ. ಜಾಗ್ರತೆ ಕೆಲಸ ಮುಗಿಸಬೇಕು ಎಂಬುದಾಗಿ ನೋಟೀಸ್ ಕೊಡುತ್ತಾ ಬಂದೆವು. ಆಫ್ಟರ್‌ವರ್ಡ್ಸ್ ಚೀಫ್ ಇಂಜಿನಿಯರ್‌ರವರು ಸ್ಥಳವನ್ನು ಇನ್ಸ್‌ಪೆಕ್ಷನ್ ಮಾಡಿ ಕೆರೆಯ ಕೆಳೆಗೆ ಹೆಚ್ಚು ಅಚ್ಚುಕಟ್ಟು ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಹೆಚ್ಚು ನೀರನ್ನು ಶೇಖರಿಸಿ ಪೂರ್ಣ ಪ್ರತಿಫಲವನ್ನು ಪಡೆದುಕೊಳ್ಳುವಂತಾಗಲು ಎಸ್ಟಿಮೇಟನ್ನು ರಿವೈಸ್ ಮಾಡಬೇಕೆಂದು ಹೇಳಿದರು. ಮತ್ತು ಡಿಯಾಲಜಿ ಇಲಾಖೆಯವರು ಕೂಡ ಇನ್ಸ್‌ಪೆಕ್ಷನ್ ಮಾಡಿ ಗಟ್ಟಿಯಾದ ಪದರ ದೊರೆಯುವವರೆಗೆ ಕೋಡಿಯ ತಳಪಾಯವನ್ನು ಹೆಚ್ಚು ಆಳವಾಗಿ ತೆಗೆಯಬೇಕೆಂದು ಸಲಹೆ ಕೊಟ್ಟರು. ಅದರ ಪ್ರಕಾರ ಎಸ್ಟಿಮೇಟ್ ರಿವೈಸ್ ಮಾಡಲಾಯಿತು. ಆ ಸ್ಟೇಜಿನಲ್ಲಿ ಕಂಟ್ರಾಕ್ಟರ್ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ರಿವೈಸ್ಡ್ ಎಸ್ಟಿಮೇಟ್ ಆದಮೇಲೆ ಅದೇ ಕಂಟ್ರಾಕ್ಟ್‌ದಾರರೊಂದಿಗೆ ಮಾತುಕತೆ ನಡೆಸಿ ಅವರಿಗೇ ಕೆಲಸ ಕೊಟ್ಟಿದ್ದೇವೆ.

ಶ್ರೀ ಎಂ. ನಾಗಪ್ಪ.—(ಈ) ಪ್ರಶ್ನೆಗೆ ಉತ್ತರವಾಗಿ ಕಂಟ್ರಾಕ್ಟ್‌ನ್ನು ರದ್ದುಪಡಿಸಿ ಒಪ್ಪಂದದಲ್ಲಿ ನೂಚಿಸಿರುವ ಕರಾರುಗಳ ಮೇರೆಗೆ ತಪ್ಪಿತಸ್ಥರಾದ ಕಂಟ್ರಾಕ್ಟರರ ವಿರುದ್ಧವಾಗಿ ಕ್ರಮವನ್ನು ಕೈಕೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ. ಕ್ರಮ ಕೈಕೊಳ್ಳುವುದು ಎಂದರೆ ಅಗ್ರಿಮೆಂಟ್‌ನ್ನು ರದ್ದು ಮಾಡುವುದು ಬಿಟ್ಟರೆ ಬೇರೆ ಕ್ರಮ ತೆಗೆದುಕೊಳ್ಳಲು ಬರುವುದಿಲ್ಲ. 16ನೇ ಪೇಜ್‌ನಲ್ಲಿ ಕೊಟ್ಟಿರುವ ಅಗ್ರಿಮೆಂಟ್‌ನಲ್ಲಿ ಈ ರೀತಿ ಹೇಳಿದೆ : ''ಒಂದು ವೇಳೆ ಕೆಲಸವನ್ನು ನಿಗದಿಯಾದ ವೇಳೆಯಲ್ಲಿ ಪೂರೈಸದೇ ಹೋದಲ್ಲಿ ನಮ್ಮ ಕಂಟ್ರಾಕ್ಟನ್ನು ಯಾವ ವಿಧವಾದ ಅಡ್ಡಿಯೂ ಇಲ್ಲದೆ ರದ್ದುಪಡಿಸಬಹುದೆಂದು ಒಪ್ಪಿ ಬರೆದುಕೊಟ್ಟ ಕಂಟ್ರಾಕ್ಟ್ ಮುಚ್ಚಳಿಕೆ...'' ಈ ಅಗ್ರಿಮೆಂಟ್ ಪ್ರಕಾರ ಅಗ್ರಿಮೆಂಟನ್ನು ರದ್ದುಪಡಿಸಿದ್ದೇವೆಂದು ಹೇಳಿದ್ದೀರಿ. ಇದೂ ಅಲ್ಲದೆ ಇನ್ನು ಯಾವ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದ ಉದ್ದೇಶವಿದೆಯೆಂಬುದನ್ನು ಹೇಳುತ್ತೀರಾ ? 8 ಲಕ್ಷ ರೂಪಾಯಿಗಳ ಎಸ್ಟಿಮೇಟ್‌ನ್ನು ರಿವೈಸ್ ಮಾಡಿ 41 ಲಕ್ಷ ರೂಪಾಯಿಗಳ ಎಸ್ಟಿಮೇಟನ್ನು ತಯಾರು ಮಾಡಲಾಗಿದೆ ಎಂದು ಹೇಳಿದ್ದೀರಿ. ಇದರ ಪ್ರಕಾರ ಅಚ್ಚುಕಟ್ಟು ಪ್ರದೇಶ ಎಷ್ಟು ಜಾಸ್ತಿಯಾಗುತ್ತದೆ ಎಂಬುದನ್ನು ಹೇಳಬೇಕು. 1961ಕ್ಕೆ ಕೆಲಸ ಮುಗಿಸಬೇಕಾಗಿದ್ದ ಕಂಟ್ರಾಕ್ಟರ್ 1968ರವರೆಗೆ ಕಾರ್ಯವನ್ನು ಮುಂದುವರಿಸುವುದಕ್ಕೆ ಅವಕಾಶ ಕೊಟ್ಟಿರುವುದು ನೋಡಿದರೆ ಸರ್ಕಾರ ಆ ಕಂಟ್ರಾಕ್ಟರ್ ಬಗ್ಗೆ ಫೇವರ್ ಆಗಿದೆ ಎಂಬುದು ಅರ್ಥವಲ್ಲವೇ ?

ಶ್ರೀಮತಿ ಬಸವರಾಜೇಶ್ವರಿ.—ಹಾಗೇನೂ ಇಲ್ಲ. ಮೊದಲಿನ ಅಂದಾಜನ್ನು ಅಂದರೆ ಆ 8 ಲಕ್ಷದ ಅಂದಾಜನ್ನು 552 ಎಕರೆಗಳಿಗೆ ಮಾತ್ರ ಮಾಡಲಾಗಿತ್ತು. ಇತ್ತೀಚೆಗೆ ಅದನ್ನು ರಿವೈಜ್ ಮಾಡಿರತಕ್ಕದ್ದು 1,254 ಎಕರೆಗಳು ವೆಟ್ಟಾಗುತ್ತದೆ. ಮತ್ತು 2,000 ಎಕರೆ ಡ್ರೈ ಕಂ ಸೆಮಿವೆಟ್ ಆಗುತ್ತದೆ. ಅಗ್ರಿಮೆಂಟ್ ಪ್ರಕಾರ ಕೆಲಸವಾಗದಿರುವುದಕ್ಕೆ ಕಾರಣಗಳೇನೆಂಬುದನ್ನು ಉತ್ತರದಲ್ಲಿ ತಿಳಿಸಿದೆ. ಕೆಲಸಗಳು ನಿಧಾನವಾದುದರಿಂದ ಅವುಗಳನ್ನು ಬೇಗನೆ ಮುಗಿಸುವಂತೆ ಮಾಡಲು ಆರ್ಟ್‌ವರ್ಕ್ಸ್ ಮತ್ತು ಮೇಸನರಿ ಕೆಲಸಗಳಿಗೆ ಸ್ವಲ್ಪ ಹೆಚ್ಚಿನ ರೇಟನ್ನು ಕೊಟ್ಟು ಕೆಲಸಗಳನ್ನು ಮಾಡಿಸಲಾಗಿದೆ. ಆ ಕಂಟ್ರಾಕ್ಟರನು ತಾ॥ 31-8-1961ಕ್ಕೆ ಕೆಲಸವನ್ನು ನಿಗದಿಯಾದ ವೇಳೆಯಲ್ಲಿ ಮುಗಿಸುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳಿದ್ದರಿಂದ ಸರ್ಕಾರದವರು ಅತನ ಬಗ್ಗೆ ಏನು ಕಾರ್ಯ ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತಾರೆ

ಶ್ರೀ ಎಚ್. ಎನ್. ನಂಜೇಗೌಡ.—ನಿಗದಿಯಾದ ವೇಳೆಯಲ್ಲಿ ಕೆಲಸವನ್ನು ಮುಗಿಸದೆ ಇದ್ದ ಬಗ್ಗೆ ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳೇನು ?

ಶ್ರೀಮತಿ ಬನವರಾಜೇಶ್ವರಿ.—ಆ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಉತ್ತರದಲ್ಲಿ ಕಾರ್ಯ ನಿಧಾನವಾಗುವುದಕ್ಕೆ ಕಾರಣಗಳನ್ನೂ ಮತ್ತು ಇತ್ತೀಚೆಗೆ ರೇಟುಗಳು ಜಾಸ್ತಿಯಾಗಿರುವುದರಿಂದ 8 ಲಕ್ಷದ ಅಂದಾಜನ್ನು 41 ಲಕ್ಷಕ್ಕೆ ರಿವೈಜ್ ಮಾಡಲಾಗಿದೆ ಎಂದು ಹೇಳಿರುತ್ತ. ಆದರೆ ರಿವೈಜ್ ಆಗುವುದಕ್ಕೆ ಮುನ್ನ ಆ ಕಂಟ್ರಾಕ್ಟರ್ ಎಷ್ಟು ಕೆಲಸ ಮಾಡಿದ್ದ ? ಯಾವಾಗ ರೇಟನ್ನು ರಿವೈಜ್ ಮಾಡಿದ್ದು ? ಕೆಲಸ ನಿಧಾನವಾಗುವುದಕ್ಕೆ ಆ ಪ್ಲಾನಿನಲ್ಲಿ ಮತ್ತು ಡಿಜೈನಿನಲ್ಲಿ ಬದಲಾವಣೆ ಮಾಡಿದ್ದೇ ಮುಖ್ಯ ಕಾರಣವಾಗಿತ್ತೆ ?

ಶ್ರೀಮತಿ ಬನವರಾಜೇಶ್ವರಿ.—ಅಂದಾಜನ್ನು ರಿವೈಜ್ ಮಾಡುವ ಕಾಲಕ್ಕಾಗಲೇ ಆ ಕಂಟ್ರಾಕ್ಟರ್ 11 ಲಕ್ಷ 23 ಸಾವಿರ ಚಿಲ್ಲರೆ ರೂಪಾಯಿಗಳ ಕಾಮಗಾರಿಯನ್ನು ಮುಗಿಸಿದ್ದನು. ಅಷ್ಟರಲ್ಲಿ ಇರಾಖೆಯವರು ಅನಿವಾರ್ಯದಿಂದ ಡಿಜೈನ್ ಮತ್ತು ಪ್ಲಾನನ್ನು ಬದಲಾಯಿಸಬೇಕಾಗಿ ಬಂತು. ಸ್ವಲ್ಪಮಟ್ಟಿಗೆ ಕಂಟ್ರಾಕ್ಟರನ ಕೆಲಸದಲ್ಲೂ ಸ್ಲ್ಯಾಕ್‌ನೆಸ್ ಇತ್ತು. ಇವೆಲ್ಲಾ ಕಾರಣಗಳಿಂದ ಸ್ವಲ್ಪ ತಡವಾಯಿತು.

ಶ್ರೀ ಎಚ್. ಡಿ. ದೇವೇಗೌಡ.—ಕಂಟ್ರಾಕ್ಟರಿಗೆ ಕೆಲಸವನ್ನು ಪ್ರಾರಂಭಮಾಡಲು ಸರಿಯಾದ ಇಫ್‌ಸ್ಯಕ್ಷನ್ ಕೊಡದೆ ಇದ್ದುದರಿಂದಲೂ ಮತ್ತು ಮಧ್ಯೆ ಡಿಜೈನ್ ಮತ್ತು ಆ ಪ್ಲಾನುಗಳನ್ನು ಬದಲಾಯಿಸಿದ್ದರಿಂದ ಮತ್ತು ಈ ಬದಲಾವಣೆಗಳು ಆ ಅಗ್ರಿಮೆಂಟಿನಲ್ಲಿ ಇಲ್ಲದಿದ್ದುದರಿಂದ ಇಲ್ಲಿ ಕಂಟ್ರಾಕ್ಟರನು ತನ್ನ ಕೆಲಸದಲ್ಲಿ ಸ್ವಲ್ಪ ಸ್ಲ್ಯಾಕ್ ಆಗಿದ್ದರೂ ಅವನಿಗೆ ಕಾಂಪನ್‌ಸೇಷನ್ ಕೊಡಬೇಕಾಗುವುದೆಂಬ ಕಾರಣದಿಂದ ಆಕ್ಷನ್ ತೆಗೆದುಕೊಳ್ಳುವುದಕ್ಕಾಗಲಲ್ಲ ಅಲ್ಲವೇ ?

ಶ್ರೀಮತಿ ಬನವರಾಜೇಶ್ವರಿ.—ಅದನ್ನು ನಾನು ಹೇಳಿದ್ದೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಇರಾಖೆಯವರ ಮೈ ಮರೆವಿನಿಂದ ಕೆಲಸವನ್ನು ನಿಧಾನ ಮಾಡಿದ ಬಗ್ಗೆ ವಿಚಾರಣೆ ಆಗಿದೆಯೇ ? ಈ ಕೆಲಸ 8 ವರ್ಷ ಕೀಗೆರ್ಲಾ ಎಳೆದಾಡಬೇಕಾಗಿದ್ದರೆ ಒಳಗೇನೋ ನಡೆದಿದೆ ಎನ್ನುವುದು ಜನರಿಗೆ ಗೊತ್ತಾಗುವುದಿಲ್ಲವೆ,?

ಶ್ರೀಮತಿ ಬನವರಾಜೇಶ್ವರಿ.—ಇದರಲ್ಲಿ ಒಳಗಾಗಲೀ ಹೊರಗಾಗಲೀ ಯಾವ ಅನುಮಾನಕ್ಕೂ ಅವಕಾಶವಿಲ್ಲ. ಕೆಲಸಗಳು ನಿಧಾನವಾಗುದಕ್ಕೆ ಆಗಲೇ ಕಾರಣವನ್ನು ತಿಳಿಸಿದ್ದೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀ ದೇವೇಗೌಡರು 8 ವರ್ಷಗಳು ಕೆಲಸ ನಿಧಾನವಾದುದಕ್ಕೆ ಕಾರಣಗಳನ್ನು ಹೇಳುತ್ತ ಇರಾಖೆಯವರು ಕಂಟ್ರಾಕ್ಟರಿಗೆ ಸಕಾಲಕ್ಕೆ ಸರಿಯಾದ ಇನ್‌ಸ್ಪಕ್ಷನ್ ಕೊಡದಿದ್ದುದರಿಂದ ಹಾಗೂ ಸರ್ಕಾರದವರು ಡಿಜೈನ್ ಮತ್ತು ಪ್ಲಾನನ್ನು ಬದಲಾಯಿಸಿದ್ದರಿಂದ ಕೆಲಸ ನಿಧಾನವಾಯಿತೆಂದು ಹೇಳಿದ್ದಾರೆ. ಉತ್ತರದಲ್ಲಿ ಕಂಟ್ರಾಕ್ಟರನು ಕೆಲಸವನ್ನು ಸಕಾಲಕ್ಕೆ ಮುಗಿಸಲಲ್ಲ, ನಿಧಾನಮಾಡಿದ್ದಾನೆ ಎಂದಿದೆ. ಈ ಎರಡರಲ್ಲಿ ಯಾವುದು ನಿಜ ?

ಶ್ರೀಮತಿ ಬನವರಾಜೇಶ್ವರಿ.—ಇರಾಖೆಯ ಅಧಿಕಾರಿಗಳ ಉದಾಸೀನದಿಂದಾಗಿ ಕೆಲಸಗಳು ನಿಧಾನವಾಗಿವೆ ಎಂದು ನಾನು ಹೇಳಲಿಲ್ಲ. ಅರ್ಥೈನ್‌ಮೆಂಟ್‌ನ್ನು ಬದಲಾಯಿಸುವುದರಲ್ಲಿ ಡಿಜೈನ್ ಬದಲಾವಣೆಯಲ್ಲಿ ಕಾಲಹಿಡಿಯಿತು. ಮತ್ತೆ ರೀ ಎಸ್ಟಿಮೇಟ್ ಮಾಡಬೇಕಾಯಿತು. ಇದಕ್ಕೆಲ್ಲಾ ಕಾಲ ಹಿಡಿದುದರಿಂದ ಕೆಲಸಗಳು ಸ್ವಲ್ಪ ನಿಧಾನವಾದುವೆಂದು ಹೇಳಿದ್ದೇನೆ.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ನಿಗದಿಯಾದ ಅವಧಿಯೊಳಗೆ ಕೆಲಸಗಳನ್ನು ಮುಗಿಸದೆ ಇದ್ದಕಾರಣ ಸರ್ಕಾರಕ್ಕಾದ ನಷ್ಟವೆಷ್ಟು ?

ಶ್ರೀಮತಿ ಬನವರಾಜೇಶ್ವರಿ.—ಆ ವಿಚಾರಗಳೆಲ್ಲಾ ಸರ್ಕಾರದವರ ಪರಿಶೀಲನೆಯಲ್ಲಿವೆ.

ಶ್ರೀ ಎಚ್. ಎನ್. ನಂಜೇಗೌಡ.—ಅಧಿಕಾರಿಗಳಿಂದ ಎಷ್ಟರಮಟ್ಟಿಗೆ ತಡವಾಗಿದೆ ಕಂಟ್ರಾಕ್ಟರಿಂದ ಎಷ್ಟರಮಟ್ಟಿಗೆ ತಡವಾಗಿದೆ ಎಂಬುದನ್ನು ವಿಚಾರಣೆ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀಮತಿ ಬನವರಾಜೇಶ್ವರಿ.—ಸರ್ಕಾರದವರ ಪರಿಶೀಲನೆಯಲ್ಲಿದೆ, ಆ ವಿಚಾರ.

ಶ್ರೀ ಎಚ್. ಎನ್. ನಂಜೇಗೌಡ.—ಕಾಂಪನ್‌ಸೇಷನ್ ಕೊಡುವುದಕ್ಕೆ ಮೊದಲು ಯಾರ ತಪ್ಪು ಎಷ್ಟೆಷ್ಟು ಎಂಬುದನ್ನು ನಿರ್ಧರಮಾಡುತ್ತೀರಾ ?

ಶ್ರೀಮತಿ ಬನವರಾಜೇಶ್ವರಿ.—ಕಂಟ್ರಾಕ್ಟರನಿಗೆ ಕೊಟ್ಟಿದ್ದ ಕೆಲಸವಲ್ಲಿ ಭಾಗಶಃ ಮಾಡಿದ್ದಾನೆ. ಅಷ್ಟರಲ್ಲೇ ಡಿಜೈನ್ ಮತ್ತು ಪ್ಲಾನ್ ಬದಲಾಗಬೇಕಾಯಿತು. ಅವನು ಕೆಲಸವನು

ಬಿಟ್ಟುಬಿಡುತ್ತೀನೆಂದು ಹೇಳಿದಾಗ ಚೀಫ್ ಇಂಜಿನಿಯರವರು ತಾ॥ 18-1-1969 ರಲ್ಲಿ ಮತ್ತು 4-7-1969 ರಲ್ಲಿ ಸರ್ಕಾರಕ್ಕೆ ಸತ್ಯ ಬರೆದಿದ್ದಾರೆ. ಸರ್ಕಾರ ಆದನ್ನು ಪರಿಶೀಲನುತ್ತಿದೆ. ಕಂಟ್ರಾಕ್ಟರನು ಈಗ ಕೆಲಸವನ್ನೆನ್ನೂ ಬಿಟ್ಟಿಲ್ಲ. ಆಜ್ಞೆರು ತೀರ್ಮಾನ ತೆಗೆದುಕೊಳ್ಳದೆ ಯಾರೂ ಕಾಂಪನ್‌ಸೇಷನ್ ಕೊಡುವುದಕ್ಕೆ ಹೋಗುವುದಿಲ್ಲ. ಅಲ್ಲದೆ ಅಲ್ಲಿ ಕೆಲವು ಐಟಂ ಕೆಲಸಗಳನ್ನು ಟೆಂಡರ್ ಕರೆದು ಪೀಸ್‌ವರ್ಕ್ ಬೇಸಿಸ್ ಮೇಲೆ ಮಾಡಿಸಲಾಗುತ್ತಿದೆ.

ಶ್ರೀ ವಿ. ಎಸ್. ಶಿವಪ್ಪ.—ಅಲ್ಲಿ ಕೆಲಸ ಮಾಡತಕ್ಕ ಕಂಟ್ರಾಕ್ಟರಿಗೆ ತೊಂದರೆ ಮಾಡಿ ಕಡಿಮೆ ಖರ್ಚಿನಲ್ಲಾಗತಕ್ಕ ಕೆಲಸಕ್ಕೆ ಅಂದರೆ 8 ಲಕ್ಷದ ಬಾಬಿಗೆ 41 ಲಕ್ಷ ಖರ್ಚುಮಾಡಲು ಹೊರಟಿರತಕ್ಕ ಈ ಸರ್ಕಾರ, ಇದು ಅಧಿಕಾರಕ್ಕೆ ಯಾವತ್ತು ಬಂದಿತೋ ಆ ದಿನದಿಂದಲೂ ಹೀಗೆ ಈ ಸರ್ಕಾರ ದೇಶಕ್ಕೆ ಅನ್ಯಾಯ ಮಾಡುತ್ತಿದೆಯಲ್ಲವೇ ?

ಶ್ರೀಮತಿ ಬನವರಾಜೇಶ್ವರಿ.—ಹಾಗೇನೂ ಇಲ್ಲ ಅದು ಮಾನ್ಯ ಸದಸ್ಯರ ಅಭಿಪ್ರಾಯ.

ಶ್ರೀ ಬಿ. ದೊಡ್ಡಬೋರೇ ಗೌಡ.—ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪೆನಿಗೆ ಈ ಕೆಲಸವನ್ನು ವಹಿಸಿದ್ದಾರೆ. ಇವರು ಸಿಂಡಿಕೇಟ್ ಪಕ್ಷಕ್ಕೆ ಸೇರಿದವರೋ ಅಥವಾ ಇಂಡಿಕೇಟ್ ಪಕ್ಷಕ್ಕೆ ಸೇರಿದವರೋ ? 33 ಲಕ್ಷ ರೂಪಾಯಿ ಅಂದಾಜಿಗಿಂತ ಹೆಚ್ಚಿಗೆ ಹೋಗಿರುವ ಹಣವನ್ನು ಕಂಟ್ರಾಕ್ಟರಿಂದ ವಸೂಲು ಮಾಡುತ್ತಾರೆಯೇ ಅಥವಾ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದ್ದಾರೆಯೇ ?

ಶ್ರೀಮತಿ ಬನವರಾಜೇಶ್ವರಿ.—ಅವರು ಯಾವ ''ಕೇಟಿಗೆ' ಸೇರಿದ್ದಾರೆ ಎಂಬುದು ಗೊತ್ತಿಲ್ಲ. ರಿವೈಸ್ಡ್ ಎಸ್ಟಿಮೇಟ್ ಆಗುವುದಕ್ಕೆ ಕಾರಣವನ್ನು ಹೇಳಿದ್ದೇನೆ. ಇದರಲ್ಲಿ ಯಾರದೂ ತಪ್ಪಿಲ್ಲ. ಮೊದಲು 500 ಎಕರೆಗೆ ನೀರಾವರಿ ಯಾಗಬೇಕೆಂದು ಉದ್ದೇಶಿಸಲಾಗಿದ್ದು, ಆದನ್ನು 3,200 ಎಕರೆ ಗಳಿಗೆ ವಿಸ್ತರಣೆ ಮಾಡಬೇಕಾಗಿ ಬಂದು ಅಂದಾಜು ಹೆಚ್ಚಾಗಿದೆ.

ಶ್ರೀ ಬಿ. ಪಿ. ಗಂಗಾಧರ್.—ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪೆನಿಯಲ್ಲಿ ಮತ್ತು ಈ ಕೆಲಸದಲ್ಲಿ ಈ ಮಾನ್ಯಸಭೆಯ ಸದಸ್ಯರ ಮನೆಯವರು ಯಾರಾದರೂ ಭಾಗಸ್ಥರು ಇದ್ದಾರೆಯೇ ? ಕೆಲಸವನ್ನು ಅದಷ್ಟು ವೇಗದಿಂದ, ಅದಷ್ಟು ಶೀಘ್ರವಾಗಿ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ, ಇಷ್ಟೇ ದಿವಸದಲ್ಲಿ ಕೆಲಸವನ್ನು ಮಾಡುತ್ತೇವೆಂದು ಉತ್ತರ ಕೊಡುತ್ತಾರೆಯೇ ?

ಶ್ರೀಮತಿ ಬನವರಾಜೇಶ್ವರಿ.—ಕೆಲಸ ಮುಗಿದಿದೆ ಎಂದು ಉತ್ತರ ಕೊಟ್ಟಿದ್ದೇನೆ. ಮನೆಯವರು ಯಾರು ಆ ಕಂಪೆನಿಯಲ್ಲಿದ್ದಾರೆನ್ನುವುದು ನನಗೆ ಗೊತ್ತಿಲ್ಲ.

Sri V. N. PATIL.—What are the recommendations of the Chie Engineer and will those recommendations be followed by the Government?

Smt. BASAVARAJESWARI.—I want notice.

Filling up the posts sanctioned on 22nd June 1970

75. Sri T. R. SHAMANNA (Fort).—

Will the Minister for Education be pleased to state :—

(*a*) The policy proposed to be followed by Government in filling up of the vacancies of posts that have been sanctioned in Governmant Order No. ED 42 MPE 69, dated 22nd June 1970 ;

(*b*) whether there is a scheme before the Government to make direct recruitment to the said posts and if so, the basis on which recruitment would be made ;

(*c*) the steps taken to safeguard the interests of the experienced teachers already working in the Department, in providing promotional chances to them while filling up the vacancies of the said posts ?